**ದಿನಾಂಕ 09.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಕೆ ಟಿ ಟಿ ವಕೀಲರಿಂದಃ**

ನನಗೆ ವಾದಿ ಮತ್ತು ಪ್ರತಿವಾದಿಗಳು ಗೊತ್ತು. ವಾದಿ ಮತ್ತು ಪ್ರತಿವಾದಿಗಳ ನಡುವೆ ಡಿಸೆಂಬರ್ 2021 10ನೇ ತಾರೀಖು ಉಪನೋಂದಾಣಾಧಿಕಾರಿಗಳ ಕ್ರಯ ಕರಾರು ಅನ್ನು ಮಾಡಿಕೊಟ್ಟಿತ್ತಾರೆ. ಆಗ ನನ್ನನ್ನ ವಾದಿ ಉಪನೋಂದಾಣಾಧಿಕಾರಿಗಳ ಕಚೇರಿಗೆ ಕರೆಯಿಸಿರುತ್ತಾರೆ. ನಾನು ವಾದಿ ಮತ್ತು ಸ್ನೇಹಿತರು. ಆ ದಿನ ವ್ಯಾಪರದ ಮಾತುಕತೆ ನಡೆದಿರುವುದಿಲ್ಲ. ಹಣ ಕೊಟ್ಟು ನೋಂದಣಿ ಮಾಡಿಕೊಂಡಿರುತ್ತಾರೆ. 10 ದಿನ ಮುಂಚಿತವಾಗಿ ವ್ಯಾಪರ ಆಗಿತು ಅದಕ್ಕೆ ನಾನು ಹೋಗಿದ್ದೆ. ಆ ವ್ಯಾಪರ ಪ್ರತಿವಾದಿಗಳ ಮನೆಯಲ್ಲಿ ನಡೆದಿರುತ್ತದೆ. ಆ ಜಮೀನನ್ನು ನಾನು ನೋಡಿರುತ್ತೇನೆ. ಆಗ ಅಕ್ಕಪಕ್ಕದಲ್ಲಿ ನನ್ನ ಜಮೀನು ಇರವುದಿಲ್ಲ. ಆ ಜಮೀನ ಚೆಕ್ಕುಬಂಧಿ ನನಗೆ ಗೊತ್ತು. ಪೂರ್ವಕ್ಕೆಃ ಅಲೂಮೆಲೆಮ ರವರ ಜಮೀನು ಪಶ್ಚಿಮಕ್ಕೆಃ ಜಯಮ್ಮ ಜಮೀನು, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ಸುರೇಖ ರವರ ಜಮೀನು, ಅದರ ಸರ್ವೆ ನಂ.276/2ಎ ಆಗಿರುತ್ತದೆ. ನಾನು ಮೇಲೆ ಹೇಳಿದ ಚೆಕ್ಕುಬಂಧಿಯನ್ನ ಕ್ರಯ ಕರಾರಿನಲ್ಲಿ ಬರೆದಿರುತ್ತಾರೆ. ನಾನು ಹೇಳಿದ ಚೆಕ್ಕುಬಂಧಿ ಸರ್ವೆ ನಂ.276/2ಬಿ ಎಂದರೆ ಸಾಕ್ಷಿಯು ಅದೇ ಪಹಣಿ ತೋರಿಸಿರುತ್ತಾರೆ, ಪಹಣಿಯಲ್ಲಿ ಚೆಕ್ಕುಬಂಧಿ ಇತ್ತ ಎಂದರೆ ಇಲ್ಲ. ನಿಪಿ-1 ಆದ ನಂತರ ಸರ್ವೆಯವರು ಜಮೀನು ಅಳೆಯಲು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಮೇಲೆ ಯಾವುದಾದರೂ ನ್ಯಾಯಾ ಪಂಚಾಯಿತಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕರಾರಿನ ಚೆಕ್ಕುಬಂಧಿ ಸರ್ವೆ ನಂ.ಗಳು ಅದಲು ಬದಲು ಆಗಿದೆ ಆದ್ದರಿಂದ ಹಣ ವಾಪಸ್ಸು ತೆಗೆದುಕೊಳ್ಳಿ ಎಂದು ಮಾತುಕತೆ ಆಗಿತ್ತು ಎಂದರೆ ಗೊತ್ತಿಲ್ಲ. ನಿಪಿ-1 ರಲ್ಲಿ ಮತ್ತು ಚೆಕ್ಕುಬಂಧಿ ವಿಚಾರವನ್ನು ಯಾರು ಹೇಳಿ ಬರೆಯಿಸಿದ್ದರೂ ಎಂದರೆ ಪ್ರತಿವಾದಿಯ ಮನೆಯವರು ಹೇಳಿರುತ್ತಾರೆ. ವಾದಿ ನನ್ನ ಸ್ನೇಹಿತ ಆದಕಾರಣ ಆತನ ಅನುಕೂಲಕ್ಕೆ ತಕ್ಕಂತೆ ನಿಪಿ-1 ಅನ್ನು ಬರೆಯಿಸಿದ್ದಾರೆ ಎಂದರೆ ಇಲ್ಲ. 1ನೇ ಪ್ರತಿವಾದಿ ಅನಕ್ಷರಸ್ಥೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಸಹಿ ಹಾಕುವಾಗ ತಿಮ್ಮಮ್ಮನವರು 1ನೇ ಪ್ರತಿವಾದಿ ಇದ್ದಾರೆ ಎಂದರೆ ಹೌದು. ಆದರೆ ಸಹಿ ಮಾಡಿದ್ದಾರೂ ಇಲ್ಲವೂ ಗೊತ್ತಿಲ್ಲ. ನಿಪಿ-1 ರ ವಿಚಾರ ಗೊತ್ತಿಲ್ಲದ್ದರೂ ವಾದಿ ಹೇಳಿದ ಹಾಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿನೆಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

(ಸಾ.ಓ.ಹೇ.ಕೇ.ಸ.ಇ.ಎ.ಒ) ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)